ನಿರ್ಧರಿಸಿದ್ದ. ‘‘ಅತ್ತೆ ಬರಲಿ, ಡೆಲಿವರಿ ಡೇಟಿಗೆ ಮೊದಲೇ ಅವರಿಲ್ಲಿ ಇದ್ದರೆ ನಮಗೆ ಸಮಾಧಾನ. ನಿಮ್ಮ ಟಿಕೇಟು ಹದಿನೈದು ದಿನ ಮುಂದಕ್ಕೆ ಹಾಕುತ್ತೇನೆ. ನೀವು ಮತ್ತೆ ಬನ್ನಿ’’ ಎಂದು ಉಪಾಯ ಸೂಚಿಸಿದ ಅಳಿಯ. ಮೂರ್ತಿರಾಯರು ಸಂತೋಷದಿಂದ ಒಪ್ಪಿದರು. ಕೊನೆಗೂ ಬೇರೆ ದಾರಿಯಿಲ್ಲದೆ ದುಗುಡದೊಂದಿಗೇ ಗೌರಿಯಮ್ಮ ಒಬ್ಬರೇ ವಿಮಾನ ಹತ್ತಿದರು.

ಮರುದಿನದಿಂದ ಮೂರ್ತಿಯವರ ದಿನಚರಿ ಬದಲಾಯಿತು. ಬೆಳಗ್ಗೆ ಎದ್ದು ಉಪಾಹಾರ ಸೇವಿಸಿ ಪೊಲೀಸ್ ಸ್ಟೇಶನ್ನಿಗೆ ಭೇಟಿಕೊಟ್ಟು ಗೋಪಾಲನನ್ನು ಹುಡುಕಿ ಸರ್ಕಲ್ ಇನ್‌ಸ್ಪೆಕ್ಟರ್ ಆಫೀಸಿಗೆ ಫೋನ್ ಮಾಡಿಸಿ ಕೇಸಿನ ವಿವರ ಪಡೆಯುವುದು. ‘‘ಇವತ್ತು ದನ ಇಲ್ಲಿ ಬರುವುದು ಅನುಮಾನ ಸಾರ್. ಏನಾದರೂ ಸುದ್ದಿ ಸಿಕ್ಕಿದ್ರೆ ನಾನೇ ಫೋನ್ ಮಾಡುತ್ತೇನೆ ಎಂದು ಗೋಪಾಲನೋ ಇತರ ಪೊಲೀಸರೋ ಹೇಳಿದ ಮೇಲೆ ಅಲ್ಲಿಂದ ಹೊರಡುವುದು. ಮನೆಗೆ ಬಂದು ಸಿಕ್ಕಿದ ಮಾಹಿತಿಯನ್ನು ಹೆಂಡತಿಗೆ ಕೊಟ್ಟು ಅವಳಿಂದ ತಾಯಿ ಮಗಳ ಮಾಹಿತಿ ಪಡೆದು ತೋಟದ ಕೆಲಸಕ್ಕೆ ಹೋಗುವುದು. ಸಂಜೆ ಮನೆಗೆ ಹೊರಟಾಗ ಕುತೂಹಲದಿಂದ ದಾರಿಯಲ್ಲೇ ಕಾದುನಿಂತು ಏನಾಯಿತು ಎಂದು ಕೇಳುವ ಗಿರಿಯನಿಗೆ ಎಲ್ಲವನ್ನೂ ವಿವರಿಸಿ ಹೇಳುವುದು. ನಾಲ್ಕು ದಿನ ಇದೇ ನಡೆಯಿತು. ಐದನೇ ದಿನ ಹೆಂಡತಿ ‘‘ದುಬೈಯಲ್ಲಿ ನಮ್ಮ ಹಾಗಲ್ಲವಂತೆ, ಹೆರಿಗೆಯಾದ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಸಮಸ್ಯೆಯೇನೂ ಇರದಿದ್ದರೆ ಆಸ್ಪತ್ರೆಯಿಂದ ಮನೆಗೆ ಕಳುಹಿಸುತ್ತಾರಂತೆ’’ ಎಂದು ಆತಂಕ ತೋಡಿಕೊಂಡಾಗ ಹೆಂಡತಿಗೆ ‘‘ನೀನು ಸುಮ್ಮನೆ ಅವರೊಂದಿಗೆ ಇರು... ಏನಾಗಲ್ಲ’’ ಎಂದು ಇಲ್ಲಿಂದಲೇ ಅಭಯವಿತ್ತರು ಮೂರ್ತಿ. ಮರುದಿನ ಬುಧವಾರ ‘‘ನೋವು ಆರಂಭವಾದರೆ ಮೊದಲೇ ಬನ್ನಿ ಇಲ್ಲವಾದರೆ ಶುಕ್ರವಾರ ಬನ್ನಿ ಎಂದು ಡಾಕ್ಟರರು ಹೇಳಿದ್ದಾರೆ’’ ಎಂದರು ಗೌರಿಯಮ್ಮ. ನಾಳೆ ದನ ಇಲ್ಲಿ ಪೊಲೀಸ್ ಸ್ಟೇಶನಿಗೆ ಬರುತ್ತೆ ಅನ್ನುವ ಶುಭ ಸಮಾಚಾರವನ್ನು ಮೂರ್ತಿಯವರೂ ಹಂಚಿಕೊಂಡರು.

ಗುರುವಾರ ಬೆಳಗ್ಗೆ ಹತ್ತುಗಂಟೆಗೇ ಪೊಲೀಸ್ ಸ್ಟೇಶನಿನಲ್ಲಿ ಹಾಜರಾಗಿದ್ದರು ಮೂರ್ತಿ. ಸುಮಾರು ಹನ್ನೆರಡುಗಂಟೆಗೆ ದನಗಳನ್ನು ಹೊತ್ತ ಟೆಂಪೊ ಬಂದು ದನಗಳನ್ನು ಇಳಿಸಿತು. ‘‘ಸರ್, ದನಗಳು ಬಂದಿವೆ. ಇನ್ನು ಕಳ್ಳರೊಂದಿಗೆ ಸರ್ಕಲ್ ಆಫೀಸ್ ಪೊಲೀಸ್ ಬರ್ತಾರೆ. ಇವತ್ತೇ ಅಂತ ಗ್ಯಾರಂಟಿ ಇಲ್ಲ. ನೀವು ಬೇಕಿದ್ದರೆ ನಿಮ್ಮ ದನವನ್ನು ಕಂಡು ಬೈಹುಲ್ಲೋ ಹಿಂಡಿಯೋ ಹಾಕಬಹುದು. ನಾವು ಹಾಕೋದು ಹೇಗೂ ಹಾಕ್ತೇವೆ’’ ಎಂದ ಗೋಪಾಲ. ತಮ್ಮ ದನವನ್ನು ನೋಡಿ ಹೋಗಿ ಅಪ್ಪಿ ಹಿಡಿದು ಹಣೆತಿಕ್ಕಿ ಕೊಂಬು ಹಿಡಿದು ಅಲ್ಲಾಡಿಸಿ ಆನಂದಿಸಿದ ಮೂರ್ತಿರಾಯರು ಲಗುಬಗೆಯಿಂದ ಮನೆಗೆ ಬಂದು ಈ ಸಿಹಿಸುದ್ದಿಯನ್ನು ಫೋನ್ ಮಾಡಿ ಹೆಂಡತಿಗೆ ತಿಳಿಸಿದರು. ಸ್ವಲ್ಪ ಹಸಿಹುಲ್ಲು ಮತ್ತು ಹಿಂಡಿ ತಾವೇ ಹೊತ್ತು ಸ್ಟೇಶನ್ನಿಗೆ ಮರಳಿದರು. ಅಷ್ಟು ಹೊತ್ತಿಗೆ ಯಾರೋ ಎಲ್ಲಾ ದನಗಳಿಗೂ ಮೇವು ಹಾಕಿ ಹೋಗಿದ್ದರು. ಆದರೂ ಮೂರ್ತಿ ತಂದ ಮೇವನ್ನು ತಮ್ಮ ಕೈಯಾರೆ ತಮ್ಮ ದನಕ್ಕೆ ತಿನ್ನಿಸಿದರು. ಸಂಜೆ ನಾಲ್ಕರ ವರೆಗೂ ಅಲ್ಲೇ ಇದ್ದ ಮೂರ್ತಿ ಇನ್ನು ಇವತ್ತು ಸರ್ಕಲ್ ಪೊಲೀಸರು ಬರುವುದಿಲ್ಲ ಎಂದು ಗೋಪಾಲ ಹೇಳಿದಾಗ ನಿರಾಶರಾಗಿ ಮನೆಯ ಕಡೆ ಹೆಜ್ಜೆ ಹಾಕಿದರು.

ಮರುದಿನವೂ ಎಂದಿನಂತೆ ಮೂರ್ತಿ ಬೆಳಗ್ಗೆ ಪೊಲೀಸ್ ಸ್ಟೇಶನ್ನಿನಲ್ಲಿ ಹಾಜರಾಗಿದ್ದರು. ಗೋಪಾಲ ಸರ್ಕಲ್ ಆಫೀಸಿನಿಂದ ಯಾರೂ ಬರುವುದಿಲ್ಲವಂತೆ. ಪ್ರೂಫ್ ಪಡೆದು ದನ ಕೊಡಲು ಹೇಳಿದ್ದಾರೆ ಎಂಬ ಶುಭಸಮಾಚಾರ ನೀಡಿದ. ಸ್ವಲ್ಪ ಹೊತ್ತಿನಲ್ಲಿ ಪೇದೆಯೊಬ್ಬರು ಮೂರ್ತಿಯನ್ನು ಕರೆದರು. ‘‘ದನ ಕೊಳ್ಳಲು ನೀವು ಲೋನ್ ಮಾಡಿದ್ದೀರಾ? ಅಥವಾ ದನ ಖರೀದಿ ಮಾಡಿದ್ದಕ್ಕೆ ರಸೀದಿ, ಎಗ್ರಿಮೆಂಟ್ ಹೀಗೆ ಯಾವುದಾದರೂ ದಾಖಲೆ ಇದೆಯಾ? ದನಕ್ಕೆ ಇನ್ಶೂರೆನ್ಸ್ ಮಾಡಿದ್ದೀರಾ? ನಮಗೆ ದನ ನಿಮ್ಮದೇ ಅಂತ ಖಚಿತಪಡಿಸುವ ಯಾವುದಾದರೂ ದಾಖಲೆ ಬೇಕು’’ ಅಂದರು ಪೇದೆ.

ಮೂರ್ತಿ ಅಸಹಾಯರಾಗಿ ಗೋಪಾಲನ ಮುಖ ನೋಡಿದರು. ಅವನೂ ಪೆಚ್ಚುಮೋರೆ ಹಾಕಿ